ಶ್ರೀ ಆರ್.ಅಶೋಕ್:– ಮಾನ್ಯ ಸದಸ್ಯರು ಮೆಡಿಕಲ್ ಎಜುಕೇಷನ್ ಮಿನಿಸ್ಟರ್‌ಗೆ ಪ್ರಶ್ನೆಯನ್ನು ಹಾಕುವ ಮುಖಾಂತರ ಅಲ್ಲಿಂದ ವರದಿಯನ್ನು ತರಿಸಿಕೊಳ್ಳಬೇಕು.

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವುದು

44 (216) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ;

ಆ) ಸಮುದಾಯ ಆರೋಗ್ಯ ಕೇಂದ್ರಗಳು ಇರದಿದ್ದರೆ ಡಂಬಳ, ಬಾಗೇವಾಡಿ, ಲಕ್ಕುಂಡಿ ಮುಳಗುಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನೇ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದೇ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮುಂಡರಗಿ ಕ್ಷೇತ್ರದಲ್ಲಿ ಒಂದು ಸಮುದಾಯ ಆರೋಗ್ಯ ಕೇಂದ್ರವಿದೆ.

ಆ) ಮುಳಗುಂದ ಹಾಗೂ ಡಂಬಳ ಪ್ರಾ.ಆ. ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾವನೆಗಳು ಬಂದಿದ್ದು ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಸ್.ಎಸ್.ಪಾಟೀಲ್:– ಮಾನ್ಯ ಅಧ್ಯಕ್ಷರೆ ಉತ್ತರವನ್ನು ಒದಗಿಸಿದ್ದಾರೆ. ಮುಂಡರಗಿ ಮತದಾರ ಕ್ಷೇತ್ರದಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಒಂದು ಸಮುದಾಯ ಆರೋಗ್ಯ ಕೇಂದ್ರವಿದೆ ಎಂದು ಹೇಳಿದ್ದೀರಿ ಅದು ಯಾವುದು? ಎಂದು ಹೇಳಬೇಕು. ಆ ನಂತರ ನಾನು ನಾಲ್ಕು ಪ್ರಶ್ನೆಗಳನ್ನು ಕೇಳಿದ್ದೆ ಅದರಲ್ಲಿ ಎರಡು ಪ್ರಶ್ನೆಗಳು ಮಾತ್ರ ಬಂದಿವೆ. ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ, ಮಾರ್ಗಸೂಚಿ ಅಂದರೆ ಏನು? ಈಗ ಮಾಡಿದಂತಹ ಸಿ ಹೆಚ್ ಸಿಗಳನ್ನು ಕೂಡ ಮಾರ್ಗಸೂಚಿ ಪ್ರಕಾರ ಮಾಡಿದ್ದೀರಾ? ಎನ್ನುವುದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಆರ್.ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಸದಸ್ಯರ ಕ್ಷೇತ್ರದ ತಾಲೂಕು ಆಸ್ಪತ್ರೆಯನ್ನು Hundred bed ಆಗಿ up-grade ಮಾಡಿದ್ದೇವೆ. ಅದರ ಜೊತೆಗೆ ತಾವೇನು ಈಗ ಬೇಡಿಕೆಯನ್ನು ಸಲ್ಲಿಸಿದ್ದೀರಾ ಡಂಬಳ, ಬಾಗೇವಾಡಿ ಲಕ್ಕುಂಡಿ, ಮುಳಗುಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂದು, ಮೇಲ್ದರ್ಜೆಗೇರಿಸ ಬೇಕಾದರೆ ಕೇಂದ್ರ ಸರ್ಕಾರ ಜನಗಣತಿಯ ಆಧಾರದ ಮೇಲೆ up-grade ಮಾಡಬೇಕು ಅಂತ ಸೂಚನೆ ಇದೆ. ಅವರ ಮಾರ್ಗಸೂಚಿ ಪ್ರಕಾರ ಒಂದು ಲಕ್ಷ ಜನಸಂಖ್ಯೆಗೆ ಒಂದು ಸಮುದಾಯ ಆರೋಗ್ಯ ಕೇಂದ್ರ ನೀಡಬೇಕು ಅಂತ ಮಾರ್ಗಸೂಚಿ ಇದೆ. ಅದರ ಪ್ರಕಾರ ನೀವು ಕೊಟ್ಟಂತಹ ಮನವಿಯನ್ನು ಪರಿಗಣಿಸಿದ್ದೇವೆ. ಅದರ ಮೇಲೆ ನಾವು ಸಮೀಕ್ಷೆ ಮಾಡಿಸಿ ಮಾಡುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಸಚಿವರು ತಾವು ಒಂದು ಸಮುದಾಯ ಕೇಂದ್ರ ಇದೆ ಎಂದು ಹೇಳಿದ್ದೀರಿ. ಯಾವುದು ಅಂತ ನಾನು ಕೇಳಿದೆ ಅದನ್ನು ತಾವು ಹೇಳಲಿಲ್ಲ. ಸಮುದಾಯ ಕೇಂದ್ರಗಳೇ ಇಲ್ಲ ನಮ್ಮ ತಾಲ್ಲೂಕಿನಲ್ಲಿ. ತಾಲೂಕು ಆಸ್ಪತ್ರೆ ಒಂದೇ ಇರುವುದು. ಅದನ್ನೇ ಸಮುದಾಯ ಆಸ್ಪತ್ರೆ ಎಂದು ನಿಮ್ಮವರು ಉತ್ತರ ಕೊಟ್ಟಿರಬೇಕು. ಸಮುದಾಯ ಆರೋಗ್ಯ ಕೇಂದ್ರಗಳೇ ಇಲ್ಲ. ನಿಮ್ಮ ಪ್ರಕಾರ ಹೋದರೆ ಜನಸಂಖ್ಯೆ ಆಧಾರದ ಮೇಲೆ ಹೋದರೆ ಒಂದು ಸಹ ಕೊಡುವುದಕ್ಕೆ ಆಗುವುದಿಲ್ಲ. ನಮ್ಮಲ್ಲಿ ಇರುವುದೇ ಒಂದು ಲಕ್ಷ ಜನಸಂಖ್ಯೆಗಿಂತ ಕಡಿಮೆ. ನಿಮಗೆ ಕೊಡುವುದಿಲ್ಲವೆಂದು ಹೇಳಿದ ಹಾಗೆ ಆಯಿತು. ಆದರೆ ನಾನು ನಿಮಗೆ ಹೇಳುತ್ತೇನೆ. ನಮ್ಮಲ್ಲಿ ಬಹಳಷ್ಟು ಹಿಂದುಳಿದಂತಹ ತಾಲ್ಲೂಕುಗಳು ಇವು. ನೀವು ಜನಸಂಖ್ಯೆ ಆಧಾರ ಹಿಡಿದರೆ ಹಳ್ಳಿಗಳಿಗೆ ಆಸ್ಪತ್ರೆಗಳೇ ಕೊಡುವುದಕ್ಕೆ ಆಗುವುದಿಲ್ಲ. ದವಾಖಾನೆಗಳಲ್ಲಿ ಈಗಲೇ ಡಾಕ್ಟರ್‌ಗಳೇ ಇಲ್ಲ. ಆ ಕಾರಣದಿಂದ ಸಮುದಾಯ ಆರೋಗ್ಯ ಕೇಂದ್ರಗಳು ನಮ್ಮ ತಾಲೂಕಿನಲ್ಲಿಯೇ ಇಲ್ಲ. ನಮ್ಮ ಕ್ಷೇತ್ರದಲ್ಲಿಯೇ ಇಲ್ಲ. ಗದಗ್ ಕ್ಷೇತ್ರಕ್ಕೂ ಸಹ ನನ್ನ ಕ್ಷೇತ್ರ ಬರುತ್ತದೆ. ನಮ್ಮ ಕ್ಷೇತ್ರದಲ್ಲಿ ಒಂದೂ ಸಮುದಾಯ ಆರೋಗ್ಯ ಕೇಂದ್ರ ಇಲ್ಲ. ಆದರೂ ಒಂದು ಇದೆ ಎಂದು ಉತ್ತರದಲ್ಲಿ ಹೇಳುತ್ತಾರೆ. ತಾಲೂಕು ಆಸ್ಪತ್ರೆಯನ್ನೇ ನೀವು ಸಮುದಾಯ ಕೇಂದ್ರ ಅಂದರೆ ನನ್ನ ತಕರಾರು ಇಲ್ಲ. ಒಂದೂ ಇಲ್ಲ ನನ್ನ ಕ್ಷೇತ್ರದಲ್ಲಿ. ತಪ್ಪು ಉತ್ತರವನ್ನು ನಿಮ್ಮ ಅಧಿಕಾರಿಗಳು ಕೊಡುತ್ತಿದ್ದಾರೆ. ಆ ತಾಲೂಕು ಆಸ್ಪತ್ರೆಯಾದರೂ ಕೂಡ ಅಲ್ಲಿ ಸರಿಯಾದ ಡಾಕ್ಟರ್ಸ್ ಇಲ್ಲ. ಆದರೂ ಅದನ್ನು hundred bed ಆಸ್ಪತ್ರೆಯನ್ನಾಗಿ

ಮಾಡಿದ್ದೀರಿ. ಇದು ಏನಾಗಿದೆ ಎಂದು ನನಗೆ ಉತ್ತರ ಕೊಡಬೇಕು. ಕನಿಷ್ಟ ಈ ಎರಡು ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ಅಶೋಕ್:– ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ನನ್ನ ಸಹಮತವಿದೆ. ಇದು Backward area ಮಾನ್ಯ ಡಾ: ನಂಜುಂಡಪ್ಪನವರ ವರದಿ ಪ್ರಕಾರ Backward Taluk ಎಂದು ಏನು ಗುರುತು ಮಾಡಿದೆ ಆ ಭಾಗದಲ್ಲಿ ವಿಶೇಷವಾದಂತಹ ಒಂದು ಗಮನವನ್ನು ಕೊಡಬೇಕು ಎಂದು ಸರ್ಕಾರಕ್ಕೆ ಇಚ್ಛೆ ಇದೆ. ಆ ದೃಷ್ಟಿಯಿಂದ ನಾನೀಗ ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ. ಈ ಬಜೆಟ್‌ನಲ್ಲಿ ಈಗಾಗಲೇ most backward ಎಂದು ಏನು ಗುರುತು ಆಗಿವೆ ಅಲ್ಲಿ, ಈಗಾಗಲೇ ಕೇಂದ್ರ ಸರ್ಕಾರ ಘೋಷಣೆ ಮಾಡಿದೆ 30 ಸಾವಿರ ಜನಸಂಖ್ಯೆಗೆ ಒಂದು ಪಿ.ಹೆಚ್. ಸಿ ಯನ್ನು ಕೊಡಬೇಕು ಎಂದು ಪಾಲಿಸಿ ಮಾಡಿದೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹಿಂದಿನ ನಮ್ಮ ಆರೋಗ್ಯ ಮಂತ್ರಿಗಳು 25 ಸಾವಿರಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಪಾಲಿಸಿಯ ಪ್ರಕಾರ ನಾವು ಇನ್ನು ಹೆಚ್ಚಿಗೆ ಕೊಡುವುದಕ್ಕೆ ಬರುವುದಿಲ್ಲ. ಆದರೆ ವಿಶೇಷವಾಗಿ ಈ ಭಾಗದಲ್ಲಿ ಹೆಚ್ಚಿನ ಅವಶ್ಯಕತೆ ಇದೆ. ಬಡವರಿಗಾಗಿ ಮುಂದಿನ ವರ್ಷದಲ್ಲಿ ಈ ಭಾಗದಲ್ಲಿ ಹೆಚ್ಚಿನ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಕೊಡಬೇಕೆನ್ನುವ ದೃಷ್ಟಿಯಿಂದ ಆ ಭಾಗಕ್ಕೆ ವಿಶೇಷವಾದಂತಹ ಒಂದು ವ್ಯವಸ್ಥೆ ಮಾಡಬೇಕು, ಹೆಚ್ಚಿನ ಪಿ ಹೆಚ್ ಸಿಗಳನ್ನಾದರೂ ತೆರೆಯಬೇಕು ಆಥವಾ ಇರುವ ಪಿ ಹೆಚ್ ಸಿಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮಾಡುವ ಬಗ್ಗೆ ನಾನು ಹೆಚ್ಚಿನ ಆದ್ಯತೆಯನ್ನು ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಸದಸ್ಯರ ಪ್ರಶ್ನೆಗೆ ಎರಡು ವಾರಗಳ ಕಾಲಾವಕಾಶವನ್ನು ಕೋರಿದ್ದಾರೆ. ಮುಂದೆ ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

(ಅನುಬಂಧ–I)

ಶ್ರೀ ಕೆ ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ದಿನಾಂಕ 1ನೇ ಫೆಬ್ರವರಿ 2007 ರಂದು 3ನೇ ಪಟ್ಟಯ ಲಿಖಿತ ಮೂಲಕ ಉತ್ತರಿಸುವ 41 ಪ್ರಶ್ನೆಗಳ ಪೈಕಿ 30 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.